# 'ಗಿರೀಶ್ ಕಾರ್ನಾಡ್ ಕೊಡುಗೆ ಅವಿಸ್ಮರಣೀಯ'

■ **ವಿಕ ಸುದ್ದಿಲೋಕ** ಬೆಂಗಳೂರು

ಗಿರೀಶ್ ಕಾರ್ನಾಡ್ ಅವರು ನಟನೆ, ಸಾಹಿತ್ಯ ಸೇರಿದಂತೆ ಹಲವು ಕ್ಷೇತ್ರಗಳಿಗೆ ನೀಡಿರುವ ಕೊಡುಗೆ ಅವಿಸ್ಮರಣೀಯ ಎಂದು ಅನುವಾದಕಿ ವನಮಾಲ ವಿಶ್ವನಾಥ ಸ್ಮರಿಸಿದರು.

ಬೆಂಗಳೂರು ಶಬ್ದನಾ ಭಾಷಾಂತರ ಕೇಂದ್ರವು ಸೆಂಟ್ರಲ್ ಕಾಲೇಜಿನ ಸಾಹಿತ್ಯ ಅಕಾಡೆಮಿಯ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿದ್ದ 'ಅನುವಾದಕರಾಗಿ ಗಿರೀಶ್ ಕಾರ್ನಾಡ್' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

**'ಅನುವಾದಕರಾಗಿ ಗಿರೀಶ್ ಕಾರ್ನಾಡ್' ಕಾರ್ಯಕ್ರಮ**

"ಕಾರ್ನಾಡ್ ಅವರು ಕನ್ನಡದಲ್ಲಿ 14 ನಾಟಕಗಳನ್ನು ರಚಿಸಿದ್ದಾರೆ. ಅವರು ಬಹುಭಾಷಾ ಪರಿಸರದಲ್ಲಿ ಹುಟ್ಟಿ ಬೆಳೆದು ಬಂದವರು. ಇದರಿಂದ ಹಲವು ಭಾಷೆಗಳನ್ನು ಕರಗತ ಮಾಡಿಕೊಂಡಿದ್ದರು. ಬಹುಮಾಧ್ಯಮಗಳಲ್ಲಿ ತೊಡಗಿಸಿಕೊಂಡ ಅವರು ರಂಗಭೂಮಿಯ ನಾಡಿ ಮಿಡಿತ ಅರಿತಿದ್ದರು. ಕನ್ನಡ ನಾಟಕಗಳಲ್ಲಿರುವ ಹಾಡುಗಳನ್ನು ಇಂಗ್ಲಿಷ್‌ನಲ್ಲಿ ಕವನಗಳಾಗಿ ಅನುವಾದಿಸುತ್ತಿದ್ದರು. ಹಳೆಯ ಕಥೆಗಳಿಗೆ ಹೊಸ ರೂಪ ನೀಡುವ ಕಲೆ ಅವರಿಗೆ ಒಲಿದಿತ್ತು," ಎಂದರು.

ಸಾಹಿತ್ಯ ಅಕಾಡೆಮಿಯ ಭಾಷಾಂತರ ಕೇಂದ್ರದ ನಿರ್ದೇಶಕ ಎಸ್.ಆರ್.ವಿಜಯಶಂಕರ್ ಮತ್ತಿತರರು ಉಪಸ್ಥಿತರಿದ್ದರು.